ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ‌ಃ2387/2022

ಚಾಸಾಃ1 ಪ್ರಾಸಾಃ1

ದಿನಾಂಕಃ 18.01.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಹೀನಾ ಕೌಸರ್ |
| ಗಂಡನ ಹೆಸರು | : | ಇರ್ಫಾನ್ ಸತ್ತರ್ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಸಹಾಯಕ ಉಪನ್ಯಾಸಕಿ |
| ವಾಸ ಸ್ಥಳ | : | ತ್ರಾಸಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಚಾಸಾ-2 ನನ್ನ ಅಣ್ಣ. ಚಾಸಾ-3 ನನ್ನ ತಂದೆ. ಚಾಸಾ-4 ನನ್ನ ಅಕ್ಕ. ಚಾಸಾ-5 ನನ್ನ ಅತ್ತಿಗೆ. ಆರೋಪಿ ನನ್ನ ಗಂಡ. ನನ್ನ ಮತ್ತು ಆರೋಪಿಯ ಮದುವೆಯು ದಿಃ 29-07-2018 ರಂದು ತ್ರಾಸಿಯ ಕ್ಲಾಸಿಕ್ ಅಡಿಟೋರಿಯಂನಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿಯು ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ. ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಹೆಚ್ಚಿನ ವರದಕ್ಷಿಣೆಗಾಗಿ ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿಲ್ಲ. ನಾನು ಆರೋಪಿಯ ವಿರುದ್ದ ಯಾವುದೇ ದೂರನ್ನು ನೀಡಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಸಣ್ಣಪುಟ್ಟ ವಿಚಾರಕ್ಕೆ ಮನಸ್ತಾಪವಾಗಿದ್ದು, ನಾನು ಪೊಲೀಸರ ಬಳಿ ಹೋದಾಗ ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದಿದ್ದರು. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಕಡತದಲ್ಲಿರುವ 4 ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-1 ರಿಂದ 4 ಎಂದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ಮದುವೆಯ ಪೂರ್ವದಲ್ಲಿ ಆರೋಪಿ ತಮ್ಮ ಮನೆಯವರೊಂದಿಗೆ ಮದುವೆ ಮಾತುಕತೆಗಾಗಿ ನಮ್ಮ ಮನೆಗೆ ಬಂದಾಗ, ಆರೋಪಿಯ ಸೌದೆ ಅರೇಬಿಯಾದಲ್ಲಿ ಉದ್ಯೋಗದಲ್ಲಿ ಇದ್ದುದರಿಂದ ವರದಕ್ಷಿಣೆಯಾಗಿ 30 ಪವನ್ ಚಿನ್ನಾಭರಣಗಳನ್ನು ಬೇಡಿಕೆ ಇಟ್ಟಿದ್ದು, ನನ್ನ ತಂದೆ ವರದಕ್ಷಿಣೆ ನೀಡಲು ನಿರಾಕರಿಸಿದ್ದು, ನಂತರ ಆರೋಪಿಯ ಒತ್ತಡಕ್ಕೆ 15 ಪವನ್ ಚಿನ್ನವನ್ನು ನೀಡಲು ಒಪ್ಪಿಕೊಂಡು ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ನನಗೆ ಚಿನ್ನವನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ.

ಮದುವೆಯ ನಂತರ ಆರೋಪಿಯು ಸಂತೆಕಟ್ಟೆಯಲ್ಲಿರುವ ಆತನ ಎಸ್ ಆರ್ ಐ ಮಂಜಿಲ್ ಗೆ ಕರೆದುಕೊಂಡು ಹೋಗಿದ್ದು, 26 ದಿನಗಳ ಕಾಲ ನನ್ನ ಜೊತೆ ಇದ್ದು ನಂತರ ಸೌದೆ ಅರೇಬಿಯಾಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ನಾನು ತಂದಂತಹ ಚಿನ್ನ ಕಡಿಮೆಯಾಯಿತು ಎಂದು ಹೇಳಿ ನನ್ನನ್ನು ಮೂದಲಿಸಿ ತಾತ್ಸಾರ ಮಾಡುತ್ತಿದ್ದು, ನನ್ನ ತವರು ಮನೆಗೆ ಬಂದು ನನ್ನ ತಂದೆಯ ಬಳಿ 30 ಪವನ್ ಚಿನ್ನವನ್ನು ಹೆಚ್ಚಿನ ವರದಕ್ಷಿಣೆಯಾಗಿ ಕೇಳಿದ್ದು, ಅವರು ನಿರಾಕರಿಸಿದಾಗ ಆರೋಪಿ ಕೋಪಗೊಂಡು ನನಗೆ ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಕುಂದಾಪುರ ಭಂಡಾರ್ ಕಾರ್ ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದೆ ಎಂದರೆ ಸರಿ. ನಾನು ಸಂತೆಕಟ್ಟೆಯಿಂದ ಕುಂದಾಪುರಕ್ಕೆ ಬಂದು ಹೋಗುತ್ತಿದ್ದು, ಆರೋಪಿ ನಾನು ಉದ್ಯೋಗವನ್ನು ಬಿಡಬೇಕೆಂದು ಹೇಳಿ ಆಕ್ಷೇಪ ಮಾಡುತ್ತಿದ್ದು, ನನ್ನನ್ನು ಉದ್ದೇಶಿಸಿ ಬೈದು ಬೆದರಿಕೆ ಹಾಕಿ ಕುತ್ತಿಗೆ ಒತ್ತಿ ಮಾನಸಿಕ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತನ್ನ ತಂದೆ ತಾಯಿ, ಅಜ್ಜಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ನನ್ನ ಮೇಲೆ ಸುಳ್ಳು ಅಪಾದನೆ ಮಾಡಿ ನನ್ನ ತವರು ಮನೆಯವರೊಂದಿಗೆ ಸಂಪರ್ಕ ಮಾಡಬಾರದೆಂದು, ತವರು ಮನೆಗೆ ಹೋಗಬಾರದೆಂದು ತಾಕೀತು ಮಾಡಿರುತ್ತಾನೆ ಎಂದರೆ ಸರಿಯಲ್ಲ.

2019, 2021 ಹಾಗೂ 2022 ರಲ್ಲಿ ಆರೋಪಿ ವಿದೇಶದಿಂದ ಊರಿಗೆ ಬರುತ್ತಿದ್ದು, ಸುಮಾರು 40 ದಿನ ಮತ್ತು 13 ದಿನ ಊರಿನಲ್ಲಿ ಇದ್ದು, ಪ್ರತಿ ಬಾರಿ ಊರಿಗೆ ಬಂದಾಗಲೂ ನಾನು ಅವರ ಮನೆಯರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ನಮ್ಮ ಮನೆಯವರೊಂದಿಗೆ ಚೆನ್ನಾಗಿರುತ್ತೇನೆಂದು ಮೂದಲಿಸಿ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 14-06-2022 ರಂದು ಆರೋಪಿ ಊರಿಗೆ ಬಂದಿದ್ದು, ನನ್ನನ್ನು ದೂಷಿಸಿ ಸಿಟ್ಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 08-07-2022 ರಂದು ಸಂತೆಕಟ್ಟೆ ಮನೆಯಿಂದ ನನ್ನನ್ನು ತವರು ಮನೆಗೆ ಕಳುಹಿಸಿದ್ದು, ವಾಪಸ್ಸು ಬರಬಾರದೆಂದು ಬೆದರಿಕೆ ಹಾಕಿದ್ದು, ನಾನು ಬೇರೆ ದಾರಿ ಇಲ್ಲದೆ ತ್ರಾಸಿಯಲ್ಲಿರುವ ನನ್ನ ತವರು ಮನೆಯಲ್ಲಿ ವಾಸವಾಗಿರುತ್ತೇನೆಂದರೆ ಸರಿಯಲ್ಲ. ಆರೋಪಿ ಮಾನಸಿಕ ಮತ್ತು ದೈಹಿಕವಾಗಿ ನನಗೆ ಹಿಂಸೆ ನೀಡಿದ್ದು, ಈ ಮೇಲೆ ಓದಿ ಹೇಳಿದಂತೆ ನಿಪಿ-1 ರಂತೆ ಪೊಲೀಸರ ಮುಂದೆ ದೂರು ನೀಡಿರುತ್ತೇನೆಂದರೆ ಸರಿಯಲ್ಲ.

ದೂರಿನ ಹಿನ್ನೆಲೆಯಲ್ಲಿ ದಿಃ 17-07-2022 ರಂದು ಪೊಲೀಸರು ತ್ರಾಸಿಯಲ್ಲಿರುವ ನಮ್ಮ ಮನೆಗೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ನಿಪಿ-2 ರಂತೆ ಮಹಜರು ಮಾಡಿ ಸದ್ರಿ ಪಂಚನಾಮೆಯನ್ನು ನನಗೆ ಓದಿ ತಿಳಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸರು ನಾನು ಆರೋಪಿಯೊಂದಿಗೆ ವಾಸವಾಗಿದ್ದ ಸಂತೆಕಟ್ಟೆ ಗೋಪಾಲಪುರದಲ್ಲಿರುವ ಆರೋಪಿಯ ಮನೆಗೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ನಿಪಿ-3 ರಂತೆ ಮಹಜರು ಮಾಡಿ ಸದ್ರಿ ಪಂಚನಾಮೆಯನ್ನು ನನಗೆ ಓದಿ ತಿಳಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ 31-08-2022 ರಂದು ನಾನು ಬೈಂದೂರು ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ನನ್ನ ಮತ್ತು ಆರೋಪಿಯ ಮದುವೆ ಆಮಂತ್ರಣ ಪತ್ರಿಕೆ, ಛಾಯಚಿತ್ರ, ಮದುವೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಪೊಲೀಸರು ಚಾಸಾ-9 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10-30 ಗಂಟೆಯವರೆಗೆ ನಿಪಿ-4 ರಂತೆ ಮಹಜರು ಮಾಡಿ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಪಂಚನಾಮೆಯನ್ನು ನನಗೆ ಓದಿ ತಿಳಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು. ಆರೋಪಿ ನನ್ನ ಗಂಡನಾದ

ಕಾರಣ ಆತನೊಂದಿಗೆ ರಾಜಿ ಮಾಡಿಕೊಂಡು ಆ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**